ಪಿಡಬ್ಲು-1

**ಸಾಕ್ಷಿಯನ್ನು ದಿನಾಂಕ 24-06-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀ ಎಸ್. ಎಂ. ಭಾಗ್ವತರಿಂದಃ**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ರಾತ್ರಿ 12-50 ರ ಸಮಯಕ್ಕೆ ಅಪಘಾತದ ವಿಚಾರವನ್ನು ಪೋಲೀಸರು ಫೋನ್ ಮಾಡಿ ತಿಳಿಸಿರುತ್ತಾರೆ. ನಾನು ತಕ್ಷಣವೇ ಸ್ಥಳಕ್ಕೆ ಹೋಗಿದ್ದು ಅಲ್ಲಿ ನನ್ನ ವಾಹನ ಹೊರತುಪಡಿಸಿ ಬೇರೆ ಯಾವುದೇ ವಾಹನ ಇರಲಿಲ್ಲ. ಗೂಡ್ಸ ವಾಹನ ನಂ.ಕೆಎ-20/ಎಬಿ-3891 ರ ಚಾಲಕನ ತಪ್ಪಿನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಅಪಘಾತಪಡಿಸಿದ ವಾಹನ ಯಾವುದು ಎಂದು ನಾನು ಪೋಲೀಸರನ್ನು ಕೇಳಿದ್ದೆ. ಆ ವೇಳೆಗೆ ಅಪಘಾತಪಡಿಸಿದ ವಾಹನವು ಅಪಘಾತವಾದ ನಂತರ ಹೊರಟು ಹೋಗಿತ್ತು. ಸದರಿ ಅಪಘಾತಪಡಿಸಿದ ವಾಹನದ ಚಾಲಕ ಯಾರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಅಪಘಾತಕ್ಕೊಳಗಾಗಿರುವ ವಾಹನದ ಮಾಲೀಕ ಎಂದು ತೋರಿಸಲು ಆರ್.ಸಿ. ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ವಾಹನಕ್ಕೆ ಯುನೈಟೆಡ್ ಇಂಡಿಯಾ ಇನ್ಸುರನ್ಸ ಕಂಪನಿಯಲ್ಲಿ ವಿಮೆ ಮಾಡಿಸಲಾಗಿತ್ತು. ಅಪಘಾತ ಆಗುವ ಕಾಲಕ್ಕೆ ವಿಮೆ ಚಾಲ್ತಿಯಲ್ಲಿತ್ತು. ಸದರಿ ವಾಹನಕ್ಕೆ ನಾನು ತೆಗೆದುಕೊಂಡಿದ್ದ ಪಾಲಿಸಿಯು ಸಂಪೂರ್ಣ ವಿಮೆ ಪಾಲಿಸಿ ಆಗಿತ್ತು. ನನ್ನ ವಾಹನಕ್ಕೆ ಆಗಿದ್ದ ಡ್ಯಾಮೇಜಗೆ ಸಂಬಂಧಪಟ್ಟ ಎಲ್ಲಾ ಬಿಲ್ಲುಗಳನ್ನು ನನ್ನ ವಾಹನದ ವಿಮಾ ಕಂಪನಿಗೆ ಹಾಜರುಪಡಿಸಿ ಸಂಪೂರ್ಣ ನಷ್ಟವನ್ನು ಈಗಾಗಲೇ ಪಡೆದಿದ್ದೇನೆ ಎಂದರೆ ಸರಿಯಲ್ಲ. ಈಗ ಎದುರುದಾರರ ವಾಹನದ ವಿಮಾ ಕಂಪನಿಯಿಂದ ಪರಿಹಾರ ಪಡೆಯಲು ಸದರಿ ಕಂಪನಿಯ ಮೇಲೆ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ದಾಖಲೆ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಸರ್ವೆ ರಿಪೋರ್ಟ ತಯಾರು ಮಾಡಿದ ಸರ್ವೆಯರರು ಅಪಘಾತ ಸ್ಥಳಕ್ಕೆ ಭೇಟಿ ಮಾಡಿ ನನ್ನ ಲಾರಿಯನ್ನು ಪರಿಶೀಲಿಸಿ ವರದಿ ನೀಡಿರುತ್ತಾರೆ. ಅವರು ಅಪಘಾತವಾದ ಮರುದಿನವೇ ಸ್ಥಳಕ್ಕೆ ಭೇಟಿ ನೀಡಿದ್ದರು. ಬಿಲ್ಲುಗಳನ್ನು ಮತ್ತು ಎಸ್ಟಿಮೇಟಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ನನ್ನ ವಾಹನಕ್ಕೆ ಡ್ಯಾಮೇಜ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾಹನವನ್ನು ಖರೀದಿಸಿ 2 ವರ್ಷ ಆಗಿತ್ತು. ಸದರಿ ಟಿಪ್ಪರ್ ಲಾರಿಗೆ ನಾನು ಎರಡನೇ ಮಾಲೀಕ. ನಾನು ಖರೀದಿ ಮಾಡುವ ಕಾಲಕ್ಕೆ ಸದರಿ ಟಿಪ್ಪರ್ 36 ಸಾವಿರ ಕಿಲೋಮೀಟರ್ ಓಡಿತ್ತು. ಅಪಘಾತ ಆಗುವ ಕಾಲಕ್ಕೆ ಸುಮಾರು 60 ಸಾವಿರ ಕಿಲೋಮೀಟರ್ ಓಡಿತ್ತು. ಎಫ್.ಸಿ. ಹಾಜರುಪಡಿಸಿದ್ದೇನೆ. ಅಪಘಾತ ಕಾಲಕ್ಕೆ ನನ್ನ ವಾಹನಕ್ಕೆ ಎಫ್.ಸಿ. ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಿಂದ 20 ಫೋಟೋವನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆಯರರ ಮೇಲೆ ಪ್ರಭಾವ ಬೀರಿ ನಿಪಿ-6 ರಿಂದ 22 ನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅರವಿಂದ ಮೋಟಾರ್ಸನ ಮಾಲೀಕರು ಯಾರು ನನಗೆ ಗೊತ್ತಿಲ್ಲ. ಅದು ಕಂಪನಿ. ಟ್ಯಾಕ್ಸ ಇನವೈಸನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವಿಮಾ ಶರತ್ತನ್ನು ಉಲ್ಲಂಘಿಸಿರುವುದರಿಂದ ಮತ್ತು ನಾನು ಈಗಾಗಲೇ ನಮ್ಮ ವಾಹನದ ವಿಮಾ ಕಂಪನಿಯಿಂದ

ಪರಿಹಾರ ಪಡೆದಿರುವುದರಿಂದ ಯಾವುದೇ ಪಡೆಯಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಕೆಎ-20/ಎಬಿ-3891ರ ಚಾಲಕನ ಯಾವುದೇ ತಪ್ಪು ಆಗಿಲ್ಲ, ನನ್ನ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಕೆಎ-20/ಎಬಿ-3891ರ ವಾಹನಕ್ಕೆ ಎಫ್.ಸಿ. ಇರಲಿಲ್ಲ ಮತ್ತು ಪರ್ಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದ ಚಾಲಕನಿಗೆ ಸೂಕ್ತ ಡಿ.ಎಲ್. ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಆದಾಯ ನಷ್ಟ ಉಂಟಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನದಿಂದ ನನಗೆ ಪ್ರತಿ ತಿಂಗಳು ಎಷ್ಟು ಆದಾಯ ಬರುತ್ತಿತ್ತು ಎಂಬ ಬಗ್ಗೆ ಲೆಕ್ಕ ಇಟ್ಟಿಲ್ಲ. ಯಾವುದೇ ಆದಾಯ ಬರದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9 ತಿಂಗಳು ಲಾರಿ ನಿಲ್ಲಿಸಿದ್ದರಿಂದ ಆದಾಯ ನಷ್ಟ ಆಗಿದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**